

## ಅಲಿಯಾ ಸ್ನೇಹ

'ಬ್ರಹ್ಮಾಸ್ತ್ರ' ಚಿತ್ರದ ಶೂಟಿಂಗ್ ಭರದಿಂದ ನಡೆದಿದೆ. ಜತೆಗೇ ರಣಬೀರ್ ಕಪೂರ್ ಮತ್ತು ಅಲಿಯಾ ಭಟ್ ನಿಕಟ ಸ್ನೇಹದ ಬಗ್ಗೆ ಸುದ್ದಿಗಳೂ ಭರದಿಂದ ಹರಡುತ್ತಿದೆ. ಸೆಟ್‌ನಲ್ಲಿದ್ದವರು ಈ ಇಬ್ಬರ ಅನ್ಯೋನ್ಯತೆಯ ಬಗ್ಗೆ ದಿನಕ್ಕೊಂದು ಸುದ್ದಿ ಹರಡುತ್ತಿದ್ದಾರೆ. ಈ ಸುದ್ದಿಗಳ ಆಳ ಎಷ್ಟಿದೆಯೆಂದು ತಿಳಿದುಕೊಳ್ಳಲು ರಣಬೀರ್‌ನ ಮಾಜಿ ಗೆಳತಿ ಕತ್ರೀನಾ, ಶೂಟಿಂಗ್ ಸಿಬ್ಬಂದಿಯೊಬ್ಬರನ್ನು ವಿಚಾರಿಸಿದ್ದಾಳಂತೆ. ಶೂಟಿಂಗ್ ತಾಣದ ಸುದ್ದಿಗಳನ್ನು ತಿಳಿದುಕೊಂಡ ಬಳಿಕ ಕತ್ರೀನಾ ಸಿಕ್ಕಾಪಟ್ಟೆ ಬೇಜಾರು ಮಾಡಿಕೊಂಡಿದ್ದಾಳಂತೆ.

ಒಂದು ಕಾಲವಿತ್ತು– ಕತ್ರೀನಾ ಮತ್ತು ಅಲಿಯಾ ಗಳಸ್ಯ–ಕಂಠಸ್ಯ ಸ್ನೇಹಿತೆಯರಾಗಿದ್ದರು. 'ಬಾಲಿವುಡ್‌ನಲ್ಲಿ ನನಗೆ ಸ್ನೇಹಿತೆ ಎಂದು ಯಾರಾದರೂ ಇದ್ದರೆ ಅದು ಕತ್ರೀನಾ. ಅವಳನ್ನು ನಾನು ಎಷ್ಟರ ಮಟ್ಟಿಗೂ ನಂಬಬಹುದು. ಅವಳೂ ಅಷ್ಟೆ, ನನ್ನನ್ನು ತುಂಬ ಹಚ್ಚಿಕೊಂಡಿದ್ದಾಳೆ' ಎಂದು ಅಲಿಯಾ ಭಟ್ ಸಂದರ್ಶನವೊಂದರಲ್ಲಿ ಹೇಳಿದ್ದಳು.

ಈಗಲೂ ಅವರು ಸ್ನೇಹಿತರೇ. ಆದರೆ ರಣಬೀರ್ ಜತೆಗೆ ಅಲಿಯಾ ಸಾಮೀಪ್ಯ ಅಧಿಕವಾದ ಬಳಿಕ ಈ ಸ್ನೇಹತಂತು ಕಡಿದುಹೋಗಿದೆ ಎನ್ನುವ ಸುದ್ದಿ ಬಂದಿದೆ. ರಣಬೀರ್ ಜೊತೆಗೆ ಅಲಿಯಾ ನಟಿಸುತ್ತಿರುವ ಮೊದಲ ಚಿತ್ರ ಇದಾಗಿರುವುದರಿಂದ ಪ್ರಚಾರಕ್ಕೆ ಹೀಗೆ ಇಬ್ಬರ ನಡುವಣ ನಿಕಟ ಸ್ನೇಹದ ಬಗ್ಗೆ ಸುದ್ದಿಗಳು ಹಬ್ಬುತ್ತಿವೆ ಎನ್ನುವವರೂ ಇದ್ದಾರೆ.



## ಪರಿಣೀತಿ ಖುಷ್

ಸಿದ್ಧಾರ್ಥ ಮಲ್ಹೋತ್ರಾ ಮತ್ತು ಪರಿಣೀತಿ ಚೋಪ್ರಾ ಜೋಡಿಯ ಹೊಸ ಚಿತ್ರ ಶೂಟಿಂಗಿಗೆ ಮುನ್ನವೇ ಸುದ್ದಿ ಮಾಡುತ್ತಿದೆ. ಚಿತ್ರದ ಹೆಸರು– ಶಾಟ್‌ಗನ್ ಶಾದಿ. ಮಾತಿನಲ್ಲಿ ಸದಾ ಸಿಡಿಯುವ ಪಟಾಕಿಯಂತಿರುವ ಪರಿಣೀತಿ, ಈ ಹೊಸ ಅವಕಾಶದಿಂದ ಖುಷಿಯಾಗಿದ್ದಾಳೆ. ''ಸಿದ್ಧಾರ್ಥ್ ಜೊತೆಗೆ ನಟಿಸುವುದು ನಿಜಕ್ಕೂ ಖುಷಿಯ ಅನುಭವ. ಈ ಹಿಂದೆ ನಾವಿಬ್ಬರೂ ಜೊತೆಯಾಗಿ ನಟಿಸಿದ 'ಹಸೀ ತೊ ಫಸೀ' ಪ್ರೇಕ್ಷಕರ ಮೆಚ್ಚುಗೆ ಗಳಿಸಿತ್ತು. ಈಗ ಒಪ್ಪಿರುವ ಹೊಸ ಚಿತ್ರದ ಕಥೆ ಮತ್ತು ನನ್ನ ಪಾತ್ರ ಚೆನ್ನಾಗಿದೆ'' ಎಂದಿದ್ದಾಳೆ ಪರಿಣೀತಿ.

ಕರಣ್ ಜೋಹರ್ ಹಣ ಹಾಕುತ್ತಿರುವ ಈ ಸಿನಿಮಾಗೆ ಹಲವು ವಾರಗಳಿಂದ ಹೀರೋಯಿನ್ ಹುಡುಕಾಟ ನಡೆದಿತ್ತು. ಬಲ್ಲ ಮೂಲಗಳ ಪ್ರಕಾರ, ಶ್ರದ್ಧಾ ಕಪೂರ್, ಕೃತಿ ಸನೂನ್ ಮತ್ತು ಸೋನಾಕ್ಷಿ ಸಿನ್ಹಾ ಅವರನ್ನು ನಿರ್ಮಾಪಕರು ಸಂಪರ್ಕಿಸಿದ್ದರಂತೆ. ಆದರೆ ಈ ಮೂವರೂ ಬ್ಯುಸಿ ಇದ್ದುದರಿಂದ ಕೊನೆಯದಾಗಿ ಪರಿಣೀತಿಗೆ ಅವಕಾಶ ಸಿಕ್ಕಿದೆಯಂತೆ.

ಬಾಲಿವುಡ್‌ನ ಅತ್ಯಂತ ಬೇಡಿಕೆಯ ನಟರಲ್ಲಿ ಒಬ್ಬನಾಗಿರುವ ಸಿದ್ಧಾರ್ಥ್ ಸದ್ಯಕ್ಕೆ ಕಾರ್ಗಿಲ್ ಹೀರೊ ವಿಕ್ರಂ ಬಾತ್ರಾನ ಜೀವನಕಥೆ ಆಧರಿತ ಚಿತ್ರದಲ್ಲಿ ನಟಿಸಲು ಸಿದ್ಧನಾಗಿದ್ದಾನೆ. ಕಪೂರ್ ಅಂಡ್ ಸನ್ಸ್, ಬಾರ್ ಬಾರ್ ದೇಖೊ ಮತ್ತು ಇತ್ತೆಫಾಖ್ ಚಿತ್ರಗಳ ಯಶಸ್ಸಿನ ಬಳಿಕ, ಸಿದ್ಧಾರ್ಥ್ ತನ್ನ ಸಂಭಾವನೆಯನ್ನೂ ಹೆಚ್ಚಿಸಿಕೊಂಡಿದ್ದಾನೆ.

■ ಬಿಂದು